

‘ದೃಶ್ಯ’ ಸಿನಿಮಾದಿಂದ ಶುರುವಾದ ಆರೋಹಿ ನಾರಾಯಣ ನಟನಾ ಪಯಣ ‘ದೃಶ್ಯ 2’ ಸಿನಿಮಾಗೆ ಬಂದು ನಿಂತಿದೆ. ಅಲ್ಲಿಂದ ಇಲ್ಲಿಯವರೆಗಿನ ಬಣ್ಣದ ಲೋಕದ ಅನುಭವ ಅವರಲ್ಲಿ ವಿಶ್ವಾಸವನ್ನೂ ಒಳ್ಳೆಯ ಸಿನಿಮಾಗಳನ್ನೇ ಮಾಡಬೇಕು ಎಂಬ ಛಲವನ್ನೂ ಹುಟ್ಟಿಸಿದೆ.

■ ಪದ್ಮನಾಭ ಭಟ್

# ಆರೋಹಿ

## ನಟನೆಯ ಮತ್ತೊಂದು ಅಧ್ಯಾಯ!

‘ದೃಶ್ಯ’ ಸಿನಿಮಾದ ಕನ್ನಡ ಅವತರಣಿಕೆಯಲ್ಲಿ ರವಿಚಂದ್ರನ್ ಮಗಳಾಗಿ ನಟಿಸಿದ್ದ ಆರೋಹಿ ನಾರಾಯಣ್ ಎಂಬ ಮುದ್ದು ಮುಖದ ಹುಡುಗಿ ಹಲವರನ್ನು ಆಕರ್ಷಿಸಿದ್ದಳು. ಬರೀ ಪ್ರೇಕ್ಷಕರನ್ನಷ್ಟೇ ಅಲ್ಲ, ಗಾಂಧಿನಗರದ ಮಂದಿಯೂ ಈ ಹುಡುಗಿಯ ನಟನಾಚತುರತೆಯನ್ನು ಮೆಚ್ಚಿಕೊಂಡಿದ್ದರು. ಆದರೆ ಆ ಸಿನಿಮಾದ ನಂತರ ಮೂರು ವರ್ಷ ಆಕೆ ಮಾಯವಾಗಿಬಿಟ್ಟಿದ್ದಳು. ವಿದ್ಯಾಭ್ಯಾಸದಲ್ಲಿ ಮುಳುಗಿದ್ದ ಆರೋಹಿ ಮತ್ತೆ ತಿರುಗಿ ಬಂದಿದ್ದು ‘ಭೀಮಸೇನ ನಳಮಹಾರಾಜ’ ಸಿನಿಮಾದ ಮೂಲಕ.

ಆ ಚಿತ್ರದ ಬಗ್ಗೆ ಅಷ್ಟೇನೂ ಪ್ರಶಂಸೆಯ ಮಾತು ಕೇಳಿಬರದಿದ್ದರೂ ಹೊಸ ರೂಪದ, ಹೊಸ ಉತ್ಸಾಹದ ತರುಣಿ ಆರೋಹಿ ಹಲವರ ಗಮನಸೆಳೆದಿದ್ದರು. ನಂತರ ಅವರು ರಮೇಶ್ ಅರವಿಂದ್ ಜೊತೆಗೆ ‘ಶಿವಾಜಿ ಸುರತ್ಕಲ್’ ಸಿನಿಮಾದಲ್ಲಿಯೂ ನಟಿಸಿದ್ದರು.

ಈಗ ಆರೋಹಿ ಸಿನಿಮಾ ಪ್ರಯಾಣ ಇನ್ನೊಂದು ಮಗ್ಗುಲಿಗೆ ಹೊರಳಿಕೊಳ್ಳುವ ಸೂಚನೆಗಳು ಕಾಣಿಸಿಕೊಳ್ಳುತ್ತಿವೆ. ಅವರೀಗ ‘ದೃಶ್ಯ 2’ ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ.

‘ದೃಶ್ಯ ಸಿನಿಮಾದಲ್ಲಿ ನಟಿಸುವಾಗ ನನಗೆ ಹತ್ತೊಂಬತ್ತು ವರ್ಷ. ನಾನಾಗ ಇನ್ನೂ ಓದುತ್ತಿದ್ದೆ. ರವಿಚಂದ್ರನ್ ಅವರ ಮಗಳ ಪಾತ್ರ ಅನ್ನೋದು ಬಿಟ್ಟರೆ ನನಗೆ ಸಿನಿಮಾ ಬಗ್ಗೆಯಾಗಲಿ, ಚಿತ್ರರಂಗದ ಬಗ್ಗೆಯಾಗಲಿ ಏನೇನೂ ಗೊತ್ತಿರಲಿಲ್ಲ. ಸೆಟ್‌ನಲ್ಲಿ ಮಾತಾಡಲೂ ಭಯ ಬೀಳುತ್ತಿದ್ದೆ. ಏನು ಮಾತಾಡಿದ್ರೆ ಏನು ತಪ್ಪಾಗತ್ತೋ ಎಂದು ಆತಂಕದಿಂದ ಸುಮ್ಮನೇ ಇರುತ್ತಿದ್ದೆ. ಆದರೆ ಎಲ್ಲರೂ ನನ್ನನ್ನು ತುಂಬ ಚೆನ್ನಾಗಿ ನೋಡಿಕೊಂಡರು. ಈಗ ಮತ್ತೆ ‘ದೃಶ್ಯ 2’ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಾಗ ಎಲ್ಲರೂ ಬದಲಾಗಿರುತ್ತಾರೆ. ಆರು ವರ್ಷಗಳ ಹಿಂದಿನ ಸ್ನೇಹ ಎಲ್ಲಿ ಉಳಿದಿರಲು ಸಾಧ್ಯ ಎಂಬ ಅನುಮಾನದಲ್ಲಿಯೇ ಸೆಟ್‌ಗೆ ಹೋದೆ. ಆದರೆ ಯಾರೂ ಏನೂ ಬದಲಾಗಿರಲಿಲ್ಲ. ಎಷ್ಟು ಬೇಗ ಎಲ್ಲರೂ ಹೊಂದಿಕೊಂಡೆವು ಅಂದರೆ ಅದೇ ನಮ್ಮ ನಿಜವಾದ ಕುಟುಂಬ ಎನ್ನುವ ಹಾಗಾಗಿತ್ತು. ಒಂದು ದಿನ ಒಟ್ಟಿಗೆ ಕೂತು ಊಟ ಮಾಡದಿದ್ದರೆ ಏನೋ ಕಳೆದುಕೊಂಡ ಹಾಗೆ ಅನಿಸುತ್ತಿತ್ತು’ ಎಂದು ನೆನಪಿಸಿಕೊಳ್ಳುತ್ತಾರೆ ಆರೋಹಿ.

ಈ ಸಿನಿಮಾದಲ್ಲಿ ಅವರು ಎಲ್ಲರಿಂದ ಪ್ರೀತಿಯನ್ನಷ್ಟೇ ಉಂಡಿಲ್ಲ. ಬದಲಿಗೆ ಅನುಭವಿ